5. ವಿಷಯ: ಮೈಸೂರು ನಗರದ ರಸ್ತೆಗಳ ಬಗ್ಗೆ

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನೊಂದು ಗಂಭೀರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಮೈಸೂರು ನಗರ ಸಾಂಸ್ಕೃತಿಕವಾಗಿ ಧಾರ್ಮಿಕ ಹಿನ್ನೆಲೆಯುಳ್ಳ ನಗರವಾಗಿದೆ. ಇದು ಅರಸರುಗಳಾಳಿದ ನಗರವಾಗಿದೆ. ಶ್ರೀಗಂಧದ ಕಂಪಿನ ನಗರ ಹಾಗೂ ಮಲ್ಲಿಗೆಯ ನಗರವೆಂದು ಹಲವಾರು ರೀತಿಯ ಪ್ರಸಿದ್ಧಿಯನ್ನು ಪಡೆದಿರತಕ್ಕಂಥ ನಗರ. ಇವೊತ್ತು ಇದು ಯಾವ ಪರಿಸ್ಥಿತಿಯಲ್ಲಿದೆಯೆಂದರೆ ರಸ್ತೆಯಲ್ಲಿ ಗುಳಿ ಇದೆಯೋ ಅಥವಾ ಗುಳಿಯಲ್ಲಿಯೇ ರಸ್ತೆ ಇದೆಯೋ ಎನ್ನುವಂಥ ರೀತಿಯಲ್ಲಿ ಮಾರ್ಪಾಟಾಗಿದೆ. ಈ ರಸ್ತೆಗಳ ದುರಸ್ತಿಗಾಗಿ 132 ಕೋಟಿ ರೂಪಾಯಿಗಳನ್ನು ಎ.ಡಿ.ಬಿ. ಬ್ಯಾಂಕ್‌ನಿಂದ ಸಾಲ ಪಡೆದು, ಆ ಹಣ ದುರುಪಯೋಗವಾಗಿದೆ. ಎಲ್ಲಾ ರಸ್ತೆಗಳ ಕೆಲಸ ಅರ್ಧಂಬರ್ಧಕ್ಕೆ ನಿಂತುಹೋಗಿ ನಾಗಾರ್ಜುನ ಕನ್‌ಸ್ಟ್ರಕ್ಷನ್‌ನವರು ಬೇರೆಯವರಿಗೆ ಗುತ್ತಿಗೆ ಕೊಟ್ಟಿದ್ದಾರೆ. ಹೀಗಾಗಿ ಅವರೂ ಮಾಡದೇ ಎಲ್ಲಾ ರಸ್ತೆಗಳ ಕೆಲಸ ಅರ್ಧಂಬರ್ಧಕ್ಕೆ ನಿಂತುಹೋಗಿದೆ. 132 ಕೋಟಿ ರೂಪಾಯಿಗಳನ್ನು ಎ.ಡಿ.ಬಿ. ಬ್ಯಾಂಕ್‌ನಿಂದ ತಂದು ಕೆಲಸವೂ ಆಗದೇ ಕೇವಲ ಆ ಹಣಕ್ಕೆ ಬಡ್ಡಿ ಕಟ್ಟುವುದೇ ಆಗಿದೆ. ಆದುದರಿಂದ ನಾನು ಒತ್ತಾಯ ಮಾಡುವುದೇನೆಂದರೆ ಎ.ಡಿ.ಬಿ. ಬ್ಯಾಂಕ್‌ನಿಂದ ತಂದ ಹಣ ಏನಾಯಿತು ಮತ್ತು ಆ ಹಣ ಖರ್ಚಾಗಿರುವ ಬಗ್ಗೆ ಶ್ವೇತಪತ್ರವನ್ನು ಸರ್ಕಾರ ಹೊರಡಿಸಬೇಕು. ಯಾವ ಕಾರಣದಿಂದ ಮೈಸೂರಿನಲ್ಲಿಯ ರಸ್ತೆಗಳು ಅರ್ಧಂಬರ್ಧಕ್ಕೆ ನಿಂತುಹೋಗಿದೆ ಎಂಬ ಬಗ್ಗೆ ಕಾರಣವನ್ನು ಈ ಸದನದಲ್ಲಿ ಕೊಡಬೇಕು. ನಾನು ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಪತ್ರವನ್ನು ಕೂಡ ಕೊಟ್ಟಿದ್ದೇನೆ. ಈಗಾಗಲೇ ಮೈಸೂರಿನ ಜನ ನಮಗೆ ಹೀನಾಮಾನವಾಗಿ ಬಯ್ಯುತ್ತಿದ್ದಾರೆ. ಗರ್ಭಿಣಿ ಸ್ತ್ರೀಯರು ಒಂದು ಮೊಹಲ್ಲಾದಿಂದ ಇನ್ನೊಂದು ಮೊಹಲ್ಲಾಕ್ಕೆ ಹೋಗುವುದರೊಳಗೆ ಮಧ್ಯದಲ್ಲಿಯೇ ಕೆಟ್ಟ ರಸ್ತೆಗಳಿಂದಾಗಿ ಹೆರಿಗೆಯಾಗುವ ಪರಿಸ್ಥಿತಿ ಇಂದು ಅಲ್ಲಿ ನಿರ್ಮಾಣವಾಗಿದೆ. ದಯಮಾಡಿ ಆ ರಸ್ತೆಗಳನ್ನು ಸರಿಪಡಿಸಿ ಮೈಸೂರಿನ ಸೌಂದರ್ಯ ಮತ್ತು ರಸ್ತೆಗಳನ್ನು ಉಳಿಸುವಂತಹ ದಿಕ್ಕಿನಲ್ಲಿ ಸರ್ಕಾರ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕೆಂದು ಕೇಳುತ್ತಿದ್ದೇನೆ. ಮತ್ತೆ ಹಣದ ಬಗ್ಗೆ ಶ್ವೇತಪತ್ರವನ್ನು ಹೊರಡಿಸಬೇಕು, ಅಲ್ಲದೆ ರಸ್ತೆಗಳನ್ನು ಸರಿಪಡಿಸುತ್ತೇವೆಂದು ಅವರು ಹೇಳುವವರೆಗೂ ನಾನು ಈ ಸದನದ ಬಾವಿಯಲ್ಲಿ ಕುಳಿತುಕೊಳ್ಳುವಂಥಾದ್ದು ಅನಿವಾರ್ಯವಾಗಿದೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸದನದ ಬಾವಿಗೆ ಬಂದರು)

ಅಧ್ಯಕ್ಷರು: ಮಾನ್ಯ ಶಂಕರಲಿಂಗೇಗೌಡರೇ, ನಾಳೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಹೇಳುತ್ತಾರೆ. ತಾವು ಈ ರೀತಿಯಾಗಿ ಸದನದ ಬಾವಿಯಲ್ಲಿ ಕುಳಿತುಕೊಂಡರೆ ಹೇಗಾಗುತ್ತದೆ?

(ಮಾನ್ಯ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ತಾವು ಈಗ ಈ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದಿದ್ದೀರಿ, ಇದರ ಬಗ್ಗೆ ಅವರು ಅಧಿಕಾರಿಗಳನ್ನು ವಿಚಾರಿಸಲು ಸಮಯ ಕೊಡಿ. ನೀವು ನಾಳೆಯವರೆಗೂ ಸಮಯ ಕೊಡಿ, ನೀವು ಈ ರೀತಿಯಾಗಿ ಮಾಡಿದರೆ ಸರಿಯಾಗುವುದಿಲ್ಲ. ತಾವು ಗಂಭೀರವಾದಂತಹ ಪರಿಸ್ಥಿತಿ ಎಂದು ಹೇಳಿದ್ದೀರಿ. ಅದಕ್ಕೆ ಸಮಯ ಬೇಡವೇ?

ಶ್ರೀ ಡಿ.ಬಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನ ವಿನಂತಿ ಏನೆಂದರೆ, ಇದು ಗಂಭೀರವಾದಂತಹ ವಿಚಾರವಾಗಿದೆ. ಅವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಇದಕ್ಕೆ ಉತ್ತರವನ್ನು ನಾಳೆ ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ನಾವು ಅಧಿಕಾರಕ್ಕೆ ಬಂದು ನಾಲ್ಕು ವಾರಗಳು ಆಗಿಲ್ಲ, ತಾವು ಆಗಲೇ ನಾಲ್ಕು ವರ್ಷಗಳಾಗಿವೆ ಎಂಬ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಈ ರೀತಿಯಾದರೆ ಆಗುವುದಿಲ್ಲ.

ಶ್ರೀ ಡಿ.ಬಿ. ಸದಾನಂದಗೌಡ: ಆ ರೀತಿಯಲ್ಲ, ತಾವು ಅಧಿಕಾರಕ್ಕೆ ಬಂದು ನಾಲ್ಕು ವಾರವಾದರೂ ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರೆಂದು ನಾವು ಮಾತನಾಡುತ್ತಿದ್ದೇವೆ.

(ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು: ತಾವು ಈಗ ಸರ್ಕಾರದ ಗಮನಕ್ಕೆ ತಂದಿದ್ದೀರಿ. ಅವರು ಸಂಬಂಧಪಟ್ಟಂತಹ ಅಧಿಕಾರಿಗಳಿಂದ ಉತ್ತರವನ್ನು ತರಿಸುವುದಕ್ಕೆ ಸಮಯವನ್ನು ಕೊಡದಿದ್ದರೆ ಹೇಗೆ? ನಿಮ್ಮಂತಹ ಬುದ್ಧಿವಂತರೆ ಹೀಗೆ ಮಾಡಿದರೆ ಹೇಗೆ? ದಯಮಾಡಿ ತಾವು ತಮ್ಮ ಸ್ಥಳಕ್ಕೆ ಹೋಗಬೇಕು.

(ಈ ಹಂತದಲ್ಲಿ ಮಾನ್ಯ ಹೆಚ್.ಎಸ್. ಶಂಕರಲಿಂಗೇಗೌಡರು ಅವರ ಸ್ಥಳಕ್ಕೆ ಹೋದರು)

ಅಧ್ಯಕ್ಷರು: ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂತಹ ಸದಸ್ಯರುಗಳು ಆದಷ್ಟು ಸಂಕ್ಷಿಪ್ತವಾಗಿ ಮಾತನಾಡಿ, ಈಗ ಆಕಸ್ಮಾತ್ ಯಾರಿಗಾದರೂ ಅವಕಾಶ ಸಿಗದಿದ್ದರೆ ಪುನಃ ಜನವರಿಯಲ್ಲಿ ಮಾನ್ಯ ರಾಜ್ಯಪಾಲರ ಭಾಷಣವಿರುತ್ತದೆ, ಆಗ ಮಾತನಾಡಬಹುದು. ಈಗ ಪ್ರತಿಯೊಬ್ಬರು ಹತ್ತು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು. ಮತ್ತೆ ಹೊಸ ಸದಸ್ಯರುಗಳು ಯಾರಿದ್ದೀರಿ, ಅವರಲ್ಲಿ ನನ್ನ ವಿನಂತಿ ಏನೆಂದರೆ, ತಾವುಗಳು ಸಭೆಯಲ್ಲಿ ಯಾವ ರೀತಿಯಲ್ಲಿ ಸಭೆ ನಡೆಯುತ್ತಿದೆ ಎಂಬುದನ್ನು ವಾಚ್ ಮಾಡಬೇಕು, ರೂಲ್ 24, 27 ಅನ್ನು ಯಾವ ರೀತಿಯಲ್ಲಿ ಪಾಲಿಸಬೇಕೆಂಬುದನ್ನು ಗಮನಿಸಬೇಕು. ತಾವು ಅವಸರಪಡಬೇಡಿ, ಇನ್ನು ಒಂದು ತಿಂಗಳಲ್ಲಿ ಮತ್ತೆ ಮಾನ್ಯ ರಾಜ್ಯಪಾಲರ ಭಾಷಣವಿರುತ್ತದೆ. ಈಗ ಸಭೆಯಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಗಮನಿಸಿಕೊಳ್ಳಿ, ಮುಂದಿನ ಸಭೆಯಲ್ಲಿ ತಮಗೆ ಜನವರಿ ತಿಂಗಳಲ್ಲಿ ಅವಕಾಶವನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಹೊಸ ಸದಸ್ಯರುಗಳಿಗೆ ಎರಡೆರಡು ನಿಮಿಷಗಳಂತೆ ಅವಕಾಶವನ್ನು ಕೊಟ್ಟರೆ, ನಮಗೂ ಅನುಭವ ಬರುತ್ತದೆ. ನಾವು ವಾಚ್ ಮಾಡಿಕೊಂಡೇ ನಮ್ಮ ಅಯಸ್ಸು ಎಲ್ಲಾ ಕಳೆದುಹೋಗುತ್ತದೆ. ಈ ಐದು ವರ್ಷಗಳಲ್ಲಿ ಈಗಾಗಲೇ ಒಂದು ತಿಂಗಳು ಕಳೆದುಹೋಗಿದೆ.

ಅಧ್ಯಕ್ಷರು: ಇನ್ನು ನಾವು ಎಂಟು ದಿವಸಗಳು ಸಭೆ ಸೇರಿರುವಂಥಾದ್ದು, ಇನ್ನು ಐದು ವರ್ಷಗಳು ಇದೆ, ಇನ್ನು ಬೇಕಾದಷ್ಟು ಸಮಯವಿದೆ.